
ಭಾರತೀಯ ಸಮಾಜದಲ್ಲಿ

# ಬಹುಜನರ ಸ್ಥಿತಿ–ಗತಿ

ಬಹುಜನ ಸಮಾಜದಲ್ಲಿ

# ಮಹಿಳೆಯರ ಸ್ಥಿತಿ–ಗತಿ



ಮನುವಾದಿ ವ್ಯವಸ್ಥೆ ಇರುವ ಈ ಸಮಾಜದಲ್ಲಿ ಜಾತಿ ಪದ್ಧತಿ, ಅಸ್ಪೃಶ್ಯತೆ, ಬಡತನ, ಅನಕ್ಷರತೆ, ಮೂಢನಂಬಿಕೆಗಳು, ಲಿಂಗ ಅಸಮಾನತೆ, ಅಧಿಕಾರಹೀನತೆ, ಆಸ್ತಿ ಹೊಂದದಿರುವಿಕೆ ಮುಂತಾದ ಅನಿಷ್ಟಗಳು ಶತಮಾನಗಳಿಂದಲೂ ಮುಂದುವರೆದು ಕೊಂಡು ಬಂದಿವೆ. ಇವುಗಳು ಬಹುಜನರ ಬದುಕನ್ನು ಹಾಳು ಗೆಡವಿದವು; ಬಹುಜನರನ್ನು ಗುಲಾಮಗಿರಿಗೆ ನೂಕಿದವು.

ಇವುಗಳನ್ನು ಮೊದಲು ಗುರುತಿಸಿ, ಇವುಗಳ ವಿರುದ್ಧ ದಿಟ್ಟ ಧ್ವನಿ ಎತ್ತಿದ್ದು ಸುಮಾರು 2500 ವರ್ಷಗಳ ಹಿಂದೆ ಮಹಾತ್ಮಾ ಬುದ್ಧ. ನಂತರ, ಮೌರ್ಯರ ಕಾಲದಲ್ಲಿ ನಮ್ಮ ಸಮಾಜದಲ್ಲಿ ಹಲವಾರು ರೀತಿಯ ಪರಿವರ್ತನೆಗಳು ಉಂಟಾದವು. ಆದರೆ, ಅವುಗಳು ಬಹಳ ವರ್ಷ ಉಳಿಯಲಿಲ್ಲ. ಪುಷ್ಯಮಿತ್ರ ಶುಂಗನ ಕಾಲದಲ್ಲಿ ಮತ್ತೆ ಅಸಮಾನತೆಯ ಆಧಾರ ಹೊಂದಿದ ಸಮಾಜ ವ್ಯವಸ್ಥೆಯನ್ನು ಅಸ್ತಿತ್ವಕ್ಕೆ ತರಲಾಯಿತು. ಅದು ನಂತರ ಅನೇಕ ಶತಮಾನಗಳ ವರೆಗೆ ಮುಂದುವರೆಯಿತು.

ಅಂಥ ವ್ಯವಸ್ಥೆಯಲ್ಲಿ ಮತ್ತೆ ಪರಿವರ್ತನೆ ತರಲು ಭಕ್ತಿ ಪಂಥದ ಮತ್ತು ವಚನಕಾರರ ಕಾಲದಲ್ಲಿ ಅನೇಕ ಪ್ರಯತ್ನಗಳು ನಡೆದವು. ಇವುಗಳಿಂದಲೂ ಹೆಚ್ಚಿನ ಪರಿಣಾಮ ಆಗಲಿಲ್ಲ.

19ನೇ ಶತಮಾನದಲ್ಲಿ ಮಹಾರಾಷ್ಟ್ರದಲ್ಲಿ ಜ್ಯೋತಿಬಾ ಫುಲೆ ಮತ್ತು ಸಾವಿತ್ರಿಬಾಯಿ ಫುಲೆ ಅವರ ನೇತೃತ್ವದಲ್ಲಿ ಮಹಾ ಕ್ರಾಂತಿ ಜರುಗಿತು. ಇವರು ಬಹುಜನರಿಗೆ ಅಕ್ಷರಲೋಕ ತೆರೆದಿಟ್ಟರು. ವಿದ್ಯೆಯ ಮೂಲಕ ಶಕ್ತಿಯನ್ನು ಪಡೆದುಕೊಳ್ಳಲು ಸಾಧ್ಯ ಎಂಬುದು ಮನವರಿಕೆಯಾಯಿತು.

ಇವರ ಚಿಂತನೆಯನ್ನು ಮುಂದುವರೆಸಿದ್ದು ವಿಶ್ವಜ್ಞಾನಿ ಭಾರತರತ್ನ ಬಾಬಾಸಾಹೇಬ್ ಡಾ॥ ಬಿ.ಆರ್.ಅಂಬೇಡ್ಕರ್ ಅವರು. ಬ್ರಿಟಿಷರು ಭಾರತದಲ್ಲಿ ಆಡಳಿತ ನಡೆಸಿದ್ದಾಗಿನಿಂದಲೇ ಅವರು ಸಮಾನತೆ, ಪ್ರಾತಿನಿಧ್ಯ, ಅಧಿಕಾರದಲ್ಲಿ ಪಾಲು ಮುಂತಾದ ಅಂಶಗಳನ್ನು ಅವರು ಮಂಡಿಸಿ, ಈ ಹಕ್ಕೊತ್ತಾಯಗಳಿಗಾಗಿ ಹೋರಾಟ ಮಾಡಿದರು. ಇದು ತಂತಾನೇ ಆಗುವುದಿಲ್ಲ. ಇದಕ್ಕಾಗಿ ನಾವು ನಿರಂತರವಾಗಿ ಧ್ವನಿ ಎತ್ತಬೇಕು; ನಮ್ಮ ಹಕ್ಕುಗಳನ್ನು ಮಂಡಿಸಬೇಕು ಮತ್ತು ನೆಗೋಷಿಯೇಟ್ ಮಾಡಬೇಕು.

ಈ ದಾರಿಯನ್ನು ನಾವು ಅನುಸರಿಸದೇ ಇರುವುದರಿಂದ, ಸಂವಿಧಾನವು ನಮಗೆ ಪೂರ್ಣ ಬೆಂಬಲವನ್ನು ನೀಡಿದ್ದರೂ, ಇಂದಿಗೂ ನಾವು ನಾನಾ ಅನ್ಯಾಯಗಳಿಗೆ ಗುರಿಯಾಗುತ್ತಿದ್ದೇವೆ; ಎಷ್ಟು ಪ್ರಗತಿಯನ್ನು ಸಾಧಿಸಲು ನಮಗೆ ಅವಕಾಶಗಳು ಸಿಗಬೇಕಿದ್ದವೋ, ಅಷ್ಟೂ ನಮಗೆ ಇನ್ನೂ ಸಿಕ್ಕಿಲ್ಲ.

ಈಗ ನಾವು ನಮ್ಮ ಬಗ್ಗೆ, ನಮ್ಮ ಸರ್ಕಾರದ ಬಗ್ಗೆ ಮತ್ತು ನಮ್ಮ ಸಮಾಜದ ಬಗ್ಗೆ ಚಿಂತಿಸಬೇಕು; ಕ್ರಿಯಾಯೋಜನೆ ರೂಪಿಸಬೇಕು. ನಮ್ಮ ಮಕ್ಕಳ ಕಾಲಕ್ಕಾದರೂ ಉತ್ತಮ ಸಮಾಜ ನಿರ್ಮಾಣ ಆಗಬೇಕು ಎಂದು ಪಟ್ಟು ಹಿಡಿದು ಕ್ರಿಯಾಶೀಲರಾಗಬೇಕು. ಭಾರತದಲ್ಲಿನ ಹಿಂದೂ ಸವರ್ಣೀಯರ ಮುಂದೆ ಮತ್ತು ಆಡಳಿತ ನಡೆಸುತ್ತಿದ್ದ ಬ್ರಿಟಿಷರ ಮುಂದೆ ಅವರು ನ್ಯಾಯ ಮತ್ತು ಒಳಗೊಳ್ಳುವಿಕೆಗಳ ಹಕ್ಕು ಪ್ರತಿಪಾದನೆ ಮಾಡಿದರು.

ಬ್ರಿಟಿಷರು ಭಾರತ ಬಿಟ್ಟು ಹೋದರು. 'ಸಂವಿಧಾನ ರಚನಾ ಸಭೆ' ರಚನೆ ಆಯಿತು. ಇದು 'ಕರಡು ಸಂವಿಧಾನ ರಚನಾ ಸಮಿತಿ'ಗೆ ಅಧ್ಯಕ್ಷರನ್ನಾಗಿ ಡಾ॥ ಅಂಬೇಡ್ಕರರನ್ನು ನೇಮಿಸಿತು. ಅವರು ಸ್ವತಂತ್ರ ಭಾರತಕ್ಕೆ ಸಂವಿಧಾನವನ್ನು ಸಿದ್ಧಪಡಿಸಿಕೊಟ್ಟರು.

ಭಾರತದ ಸಂವಿಧಾನವು ಸ್ವಾತಂತ್ರ್ಯವನ್ನು, ಸಮಾನತೆ ಯನ್ನು ಮತ್ತು ಬಂಧುತ್ವವನ್ನು ಪ್ರತಿಪಾದಿಸಿತು. ಭಾರತದ ಎಲ್ಲಾ ಪ್ರಜೆಗಳಿಗೆ ಸಮಾನ ಅವಕಾಶಗಳನ್ನು ಒದಗಿಸಿತು. ಜಾತಿ, ಧರ್ಮ, ಲಿಂಗ, ಭಾಷೆ, ಪ್ರದೇಶ ಇತ್ಯಾದಿಗಳ ಆಧಾರದಲ್ಲಿ ತಾರತಮ್ಯ ಮಾಡುವುದನ್ನು ನಿಷೇಧಿಸಿತು. ಅಸ್ಪೃಶ್ಯತೆ ಆಚರಣೆ

ಯನ್ನು ಕೂಡ ರದ್ದುಪಡಿಸಿತು. ಎಲ್ಲರಿಗೂ ಮತದಾನ ಹಕ್ಕು ಒದಗಿಸಿತು. ಶತಮಾನಗಳ ಕಾಲ ಶೋಷಣೆಗೆ ಗುರಿಯಾಗಿದ್ದ ಸಮುದಾಯಗಳಿಗೆ ವಿಶೇಷ ಸೌಲಭ್ಯಗಳನ್ನು ಒದಗಿಸಿತು.

ಪರಿಣಾಮವಾಗಿ, ಸ್ವತಂತ್ರ ಭಾರತದಲ್ಲಿ ನಾವು ಅಂದರೆ ಅಸಮಾನತೆಗೆ ಗುರಿಯಾಗಿದ್ದವರು ಸಮಾನತೆಯನ್ನು ಪಡೆದು ಕೊಳ್ಳಲು ಸಾಧ್ಯವಾಗಿದೆ. ಶಿಕ್ಷಣ ಪಡೆಯುವುದು ಸಾಧ್ಯವಾಗಿದೆ; ಸರ್ಕಾರಿ ಉದ್ಯೋಗಗಳಲ್ಲಿ ಅವಕಾಶ ಪಡೆದುಕೊಳ್ಳುವುದು ಸಾಧ್ಯವಾಗಿದೆ. ನಾವು ವ್ಯಾಪಾರ ಮಾಡಲು ಬಯಸಿದರೂ ಯಾರೂ ಅಡ್ಡಿಪಡಿಸುವ ಹಾಗಿಲ್ಲ.

ಸ್ವತಂತ್ರ ಭಾರತದಲ್ಲಿ ನಾವು ತುಸು ವಿದ್ಯಾವಂತ ರಾಗಿದ್ದೇವೆ; ಕೆಲವೊಂದು ಸರ್ಕಾರಿ ಹುದ್ದೆಗಳನ್ನು ಪಡೆದಿದ್ದೇವೆ; ಅಧಿಕಾರಿಗಳೂ ಆಗಿದ್ದೇವೆ; ನ್ಯಾಯವಾದಿಗಳು, ಪ್ರಾಧ್ಯಾಪಕರು ಕೂಡ ಆಗಿದ್ದೇವೆ. ನಮ್ಮಲ್ಲಿ ಕೆಲವರಾದರೂ ನಮ್ಮ ಮಕ್ಕಳನ್ನು ಉತ್ತಮ ಶಾಲೆ/ಕಾಲೇಜುಗಳಿಗೆ ಕಳಿಸುತ್ತಿದ್ದೇವೆ. ಇಷ್ಟೆಲ್ಲಕ್ಕೂ ಕಾರಣ ಎಂದರೆ, ಡಾ|| ಅಂಬೇಡ್ಕರ್ ಅವರ ನಿರಂತರ ಶ್ರಮ. ಅವರು ಇದ್ದುದರಿಂದಲೇ ಈಗ ನಾವು ತುಸು ಒಳ್ಳೇ ಬಟ್ಟೆ ಧರಿಸುತ್ತಿದ್ದೇವೆ; ಒಳ್ಳೇ ಊಟ ಮಾಡುತ್ತಿದ್ದೇವೆ; ಸಮಾಜದಲ್ಲಿ ತುಸುವಾದರೂ ಪ್ರಾತಿನಿಧ್ಯ ಪಡೆದುಕೊಳ್ಳುತ್ತಿದ್ದೇವೆ.

ಬಾಬಾಸಾಹೇಬರು ಕಂಡ ಕನಸು ಇನ್ನೂ ಪೂರ್ತಿ ನನಸಾಗಿಲ್ಲ. ರಾಜಕೀಯ ಸಮಾನತೆಯನ್ನು ಅವರು ತಮ್ಮ ಕಾಲದಲ್ಲೇ ಎಲ್ಲರಿಗೆ ಒದಗಿಸಿದರು. ಆದರೆ, ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯನ್ನು ಇನ್ನೂ ನಾವು ಪಡೆಯಬೇಕಿದೆ. ಇದಕ್ಕಾಗಿ ನಾವು ರಾಜಿರಹಿತ ಧ್ವನಿಯನ್ನು ಸಂಘಟಿತರಾಗಿ ಎತ್ತಬೇಕಿದೆ.

ನಾವು ಈಗ (1) ನಮ್ಮಲ್ಲೇ (2) ಸರ್ಕಾರದಲ್ಲಿ (3) ಸಮಾಜದಲ್ಲಿ ಹೀಗೆ ಒಟ್ಟು ಮೂರು ಕಡೆಗಳಲ್ಲಿ ಪರಿವರ್ತನೆ ಆಗುವುದನ್ನು ನಿರೀಕ್ಷಿಸಬೇಕಿದೆ.

ಈ ನಿಟ್ಟಿನಲ್ಲಿ ನಮ್ಮ ಸೋದರರು ಕೆಲವಾರು ಸಂಘಗಳನ್ನು ಮಾಡಿಕೊಂಡಿದ್ದಾರೆ; ಅವರು ಚಿಂತನೆ ನಡೆಸಿದ್ದಾರೆ; ಆಗಾಗ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಾರೆ; ಸರ್ಕಾರದ ಜೊತೆಗೆ ಮಾತುಕತೆಯನ್ನೂ ನಡೆಸುತ್ತಾರೆ.

ಆದರೆ. . . .

ಈ ಪ್ರಯತ್ನಗಳಲ್ಲಿ ನಾವು ಮಹಿಳೆಯರು ಕೂಡ ತೊಡಗುವುದು ಅವಶ್ಯ. ಒಟ್ಟಾರೆ ಭಾರತದ ಸಮಾಜದಲ್ಲಿ ಮಹಿಳೆಯರಿಗೆ ಹೆಚ್ಚಿನ ಸ್ವಾತಂತ್ರ್ಯ ಇಲ್ಲ. ಅವರನ್ನು ಮನೆಗೆಲಸಕ್ಕೆ ಸೀಮಿತಗೊಳಿಸಲಾಗಿದೆ. ಇದು ಮನುಧರ್ಮದ ಕೊಡುಗೆ.

ಆದರೆ, ಇದು ನಮ್ಮನ್ನೂ ಆವರಿಸಿಕೊಳ್ಳಲು ಅವಕಾಶ ನೀಡುವುದು ಸೂಕ್ತವಲ್ಲ. ನಮ್ಮ ಸಮಾಜದಲ್ಲಿ ಜಾತಿ ಸಮಾನತೆ, ಧರ್ಮ ಸಮಾನತೆ ಹೇಗೆ ಅತ್ಯವಶ್ಯವೊ ಹಾಗೆಯೇ ಲಿಂಗ ಸಮಾನತೆಯೂ ಅವಶ್ಯ. ಇದನ್ನು ನಾವು ನಮ್ಮ ಸಮಾಜಕ್ಕೆ ಮನವರಿಕೆ ಮಾಡಿಕೊಡಬೇಕು.

'ಮಹಿಳೆಯರಿಗೆ ಎಷ್ಟು ಸಮಾನತೆ ದೊರಕಿದೆ ಎಂಬು ದನ್ನು ನೋಡಿ, ಆ ಸಮಾಜವು ಎಷ್ಟು ಪ್ರಗತಿಪರವಾಗಿದೆ ಎಂಬುದನ್ನು ಗುರುತಿಸಬಹುದು' ಎಂದಿದ್ದರು ಬಾಬಾಸಾಹೇಬರು.

ಒಟ್ಟಾರೆ ಸಮಾಜದಲ್ಲಿ ನಮಗೆ ಅಂದರೆ ಬಹುಜನರಿಗೆ ನ್ಯಾಯ ಸಮಾನತೆ ಸಿಕ್ಕಿಲ್ಲ. ಹಾಗೆಯೆ, ನಮ್ಮ ಬಹುಜನ ಸಮಾಜದಲ್ಲಿ ಮಹಿಳೆಯರಿಗೆ ನ್ಯಾಯ ಸಮಾನತೆ ಸಿಕ್ಕಿಲ್ಲ ಎನಿಸುತ್ತದೆ.

ಅತಿ ಸೂಕ್ಷ್ಮವಾಗಿರುವ ಈ ಅಂಶವನ್ನು ಅರ್ಥಮಾಡಿ ಕೊಂಡು, ನಾವು ನಮ್ಮ ಮುಂದಿನ ಹೆಜ್ಜೆಗಳನ್ನು ಇಡಬೇಕಿದೆ.

ಬಾಬಾಸಾಹೇಬರು ತೋರಿಸಿದ ದಾರಿಯಲ್ಲಿ ನಾವು ನಮ್ಮ ದಾರಿಯನ್ನು ಕಂಡುಕೊಳ್ಳಬೇಕಿದೆ. ನ್ಯಾಯ–ವಿಶ್ವಾಸ–ಸಮಾನತೆ ಇರುವಂಥ ಸಮಾಜವನ್ನು ರೂಪಿಸಲು ನಮ್ಮ ಕಡೆಯಿಂದ ಆಗುವಷ್ಟು ಪ್ರಯತ್ನಗಳನ್ನು ನಾವು ಮಾಡಬೇಕಿದೆ.

---

## ಅಂಬೇಡ್ಕರ್‌ವಾದಿ ಮಹಿಳೆಯರ ಸಂಘಟನೆ

ಎಲ್ಲಾ ರೀತಿಯ ಅಸಮಾನತೆ ಮತ್ತು ಶೋಷಣೆಯನ್ನು ನಿರ್ಮೂಲನೆ ಮಾಡಲು ಅಂಬೇಡ್ಕರ್ ಚಿಂತನೆಯು ಅಪಾರ ಶಕ್ತಿಯನ್ನು ನೀಡುತ್ತದೆ. ಆದ್ದರಿಂದ, ಎಲ್ಲಾ ಜಾತಿಗಳ ಮತ್ತು ಮಹಿಳೆಯರು ಅಂಬೇಡ್ಕರ್ ಚಿಂತನೆಯನ್ನು ಸಮರ್ಪಕವಾಗಿ ಅರ್ಥಮಾಡಿಕೊಳ್ಳಬೇಕು; ಆ ಚಿಂತನೆಯು ತೋರುವ ಬೆಳಕಲ್ಲಿ ಸಂಘಟಿತರಾಗಬೇಕು.

ಈ ಕಾರ್ಯದ ಮುಂಚೂಣಿಯಲ್ಲಿ ವಿದ್ಯಾವಂತ ಮತ್ತು ಹೋರಾಟ ಮನೋಭಾವದ ಶೋಷಿತ ಮಹಿಳೆಯರು ಇರುವುದು ಸೂಕ್ತ. ಇವರು ವೈಚಾರಿಕವಾಗಿ ತಮ್ಮ ದಾರಿಯನ್ನು ಗುರುತಿಸಿ ಕೊಂಡು, ಆ ದಾರಿಯಲ್ಲಿ ಇತರರನ್ನೂ ಕರೆದೊಯ್ಯುವ ಇಚ್ಛಾ ಶಕ್ತಿಯನ್ನು ತೋರಬೇಕಿದೆ.

ಶೋಷಿತ ಮಹಿಳೆಯರು ಇಡುವ ಈ ಹೆಜ್ಜೆಗಳಿಗೆ ಪೂರ್ಣ ಒತ್ತಾಸೆಯನ್ನು ನೀಡುವುದು ಶೋಷಿತ ಜಾತಿ ಮತ್ತು ವರ್ಗಗಳ ಪುರುಷರ ಜವಾಬ್ದಾರಿ.

ಈ ನಿಟ್ಟಿನಲ್ಲಿ ನಡೆಯುವ ಯಾವುದೇ ಪ್ರಯತ್ನಗಳೊಂದಿಗೆ ಹೃತ್ಪೂರ್ವಕವಾಗಿ ತನ್ನನ್ನು ತೊಡಗಿಸಿಕೊಂಡು, ಜೊತೆಗೂಡಲು ಕರ್ನಾಟಕ ಸಮಾಜವಾದಿ ವೇದಿಕೆ ಸಿದ್ಧ.

ಈಗ ಶೋಷಿತ ಜಾತಿ ಮತ್ತು ವರ್ಗಗಳ ಮಹಿಳೆಯರು ಮುಂದೆ ಬರಬೇಕಿದೆ. ಅವರು ಅಥವಾ ಅವರ ಪರವಾಗಿ ಯಾರೇ ಆಗಲಿ, ಕರ್ನಾಟಕ ಸಮಾಜವಾದಿ ವೇದಿಕೆಯನ್ನು ಸಂಪರ್ಕ ಮಾಡಬಹುದು.

**ಕರ್ನಾಟಕ ಸಮಾಜವಾದಿ ವೇದಿಕೆ**
94491–02294